# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

**ಬೆಂಗಳೂರು**

ದಿನಾಂಕ 06.03.2016ರಂದು ಬೆಳಿಗ್ಗೆ 11.30ಗಂಟೆಗೆ ವಿಜ್ಞಾನ ಭವನದಲ್ಲಿ ಜರುಗಿದ ಕರಾವಿಪದ ಕಾರ್ಯಕಾರಿ ಸಮಿತಿ ಸದಸ್ಯರ 11ನೇ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದವರು**

1. ಶ್ರೀ ಎಸ್.ವಿ. ಸಂಕನೂರ
2. ಶ್ರೀ ಚಳ್ಳಕೆರೆ ಯರ್ರಿಸ್ವಾಮಿ
3. ಶ್ರೀ ಬಿ. ದೊಡ್ಡಬಸಪ್ಪ
4. ಡಾ॥ ವಸುಂಧರಾ ಭೂಪತಿ
5. ಶ್ರೀ ಟಿ.ಜಿ. ಪ್ರೇಮ್‌ಕುಮಾರ್
6. ಶ್ರೀ ಗಿರೀಶ್ ಬಿ. ಕಡ್ಲೇವಾಡ
7. ಶ್ರೀ ಎಂ.ಎನ್. ಮುಷ್ಟೂರಪ್ಪ
8. ಡಾ. ಶೇಖರ್ ಗೌಳೇರ್
9. ಶ್ರೀ ಪಂಡಿತ್ ಕೆ. ಬಾಳೂರೆ
10. ಡಾ. ಆರ್.ಎಸ್. ಎಲಿ
11. ಡಾ. ಎಚ್.ಆರ್. ಸ್ವಾಮಿ
12. ಶ್ರೀ ನಾಗೇಶ್ ಅರಳುಕುಪ್ಪೆ
13. ಶ್ರೀ ಟಿ.ಜಿ. ಕೃಷ್ಣಮೂರ್ತಿ ರಾಜ್ ಅರಸು
14. ಪ್ರೊ॥ ಸಿ. ನಾಗರಾಜ್
15. ಶ್ರೀ ಕೊಟ್ರುಸ್ವಾಮಿ ಎಸ್.ಎಂ.
16. ಶ್ರೀ ಎಂ. ಗಂಗಾಧರಪ್ಪ
17. ಶ್ರೀ ಅಣದೂರು ಮಹಾರುದ್ರಪ್ಪ
18. ಶ್ರೀ ಹೆಚ್.ಜಿ. ಹುದ್ದಾರ

19 ಡಾ. ಸಂಗಮೇಶ್ ಎಸ್. ಹಿರೇಮಠ

20. ಶ್ರೀ ಕೃಷ್ಣೇಗೌಡ ಸಿ.
21. ಶ್ರೀ ಆರ್.ವಿ. ದೇಮಶೆಟ್ಟಿ

**ಸಭೆಯಲ್ಲಿ ಗೈರುಹಾಜರಾದವರು**

1. ಡಾ॥ ಮಂಜುನಾಥ ಡಿ.
2. ಶ್ರೀ ಆರ್.ಎಸ್. ಪಾಟೀಲ
3. ಶ್ರೀ ಕುಂಟೆಪ್ಪ ಗೌರೀಪುರ
4. ಡಾ. ಹೆಚ್. ಹೊನ್ನೇಗೌಡ, ಕೆ.ಎಸ್.ಟಿ.ಎ.
5. ಡಾ. ಶ್ರೀಕಂಠೇಶ್ವರ ಸ್ವಾಮಿ, ಕೆ.ಎಸ್.ಸಿ.ಎಸ್.ಟಿ.

5\. ಶ್ರೀ ಎನ್.ಸಿ. ಶಿವಪ್ರಕಾಶ್, IISc.

ಕರಾವಿಪದ ಅಧ್ಯಕ್ಷರಾದ ಶ್ರೀ ಎಸ್.ವಿ. ಸಂಕನೂರರವರು ಹಾಜರಿದ್ದ ಸದಸ್ಯರನ್ನು ಸ್ವಾಗತಿಸುವುದರೊಂದಿಗೆ ಕಾರ್ಯಕಾರಿ ಸಮಿತಿಯ ಸಭೆಗೆ ಚಾಲನೆ ನೀಡಿದರು.

ಕಳೆದ ಜನವರಿ ಮಾಹೆಯಲ್ಲಿ 5 ದಿನಗಳ ಕಾಲ ಮೈಸೂರಿನಲ್ಲಿ ಜರುಗಿದ 103ನೇ ಭಾರತೀಯ ವಿಜ್ಞಾನ ಸಮಾವೇಶ (Indian Science Congress) ಕುರಿತು ಮಾನ್ಯ ಅಧ್ಯಕ್ಷರು ತಮ್ಮ ಸ್ವಾಗತ ಭಾಷಣದಲ್ಲಿ ಪ್ರಸ್ತಾಪಿಸುತ್ತಾ ದೇಶದ ಪ್ರದಾನ ಮಂತ್ರಿಗಳಿಂದ ಉದ್ಘಾಟಿಸಲ್ಪಟ್ಟ ಸದರಿ ಸಮಾವೇಶದಲ್ಲಿ ಹಲವಾರು ಪ್ರತಿಷ್ಠಿತ ವಿಜ್ಞಾನಿಗಳು ಭಾಗವಹಿಸಿದ್ದನ್ನು ಸಭೆಯ ಗಮನಕ್ಕೆ ತಂದರು. ಕರಾವಿಪದ ಕಾರ್ಯಕಾರಿ ಸಮಿತಿಯ ಕೆಲವು ಸದಸ್ಯರು ಸಹ ಈ ಒಂದು ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡಿರುವುದು ಹಾಗೂ ಒಟ್ಟಾರೆ ಸಮಾವೇಶವು ಯಶಸ್ವಿಯಾಗಿ ನಮ್ಮ ರಾಜ್ಯದಲ್ಲಿ ಜರುಗಿರುವುದು ಅತ್ಯಂತ ಹೆಮ್ಮೆಯ ವಿಷಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು.

ಮುಂದುವರೆದು, ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಹೆಚ್.ಜಿ. ಹುದ್ದಾರ್ ಅವರು ವಿಶೇಷವಾಗಿ ಬಾಗಲಕೋಟೆ ಜಿಲ್ಲೆಯಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ರಾಜ್ಯಮಟ್ಟದ ಡಾ॥ ಸ.ಜನಾ. ಪ್ರಶಸ್ತಿ ದೊರಕಿರುವುದನ್ನು ಅಧ್ಯಕ್ಷರು ಸಭೆಗೆ ತಿಳಿಸಿದರು. ಸಭೆಯು ಈ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಮುಂದಿನ ದಿನಗಳಲ್ಲಿ ಅವರಿಗೆ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಲಭಿಸಲೆಂದು ಹಾರೈಸಿತು.

2\. ನಂತರದಲ್ಲಿ, ನಿಗದಿತ ಕಾರ್ಯಸೂಚಿ ಅನ್ವಯ ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಲಾಯಿತು. ಈ ಹಿಂದಿನ ಕಾರ್ಯಕಾರಿ ಸಮಿತಿ ಸಭೆಯ ನಡವಳಿಗಳು ಹಾಗೂ ತತ್ಸಂಬಂಧ ಕೈಗೊಂಡ ಅನುಸರಣಾ ಕ್ರಮಕ್ಕೆ ಪ್ರಸ್ತುತ ಸಭೆಯು ಅನುಮೋದನೆ ನೀಡಿತು. ಈ ಸಂದರ್ಭ ಕರಾವಿಪ ಉದ್ಯೋಗಿಗಳ ಇಕಈ ಗೆ ಸಂಬಂಧಿಸಿದಂತೆ ಪಾವತಿಸಿದ ದಂಡ

ಕುರಿತು ಕೆಲವು ಸದಸ್ಯರು ಸ್ಪಷ್ಟೀಕರಣ ಕೇಳಲಾಗಿ, ಈ ವಿಷಯವನ್ನು ಹಿಂದಿನ ಕಾರ್ಯಕಾರಿ ಸಮಿತಿಯಲ್ಲೇ ಸಮಗ್ರವಾಗಿ ಚರ್ಚಿಸಿ, ಕೈಗೊಂಡ ಕ್ರಮಗಳ ಕುರಿತು ಮಾಹಿತಿ ನೀಡಲಾಗಿದೆಯೆಂದು ಸಭೆಗೆ ತಿಳಿಸಲಾಗಯಿತು. ಆದರೂ ಈ ಕುರಿತು ಮಾನ್ಯ ಅಧ್ಯಕ್ಷರು ಮತ್ತೊಮ್ಮೆ ಸಭೆಗೆ ವಿವರ ನೀಡಿದರು. ದಂಡವನ್ನು ಪ್ರತಿಭಟನೆಯೊಂದಿಗೆ ಪಾವತಿಸಿದ್ದು ಈಗಾಗಲೇ EPF ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲಾಗಿರುವುದನ್ನು ಸಹ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು.

3. ದಿನಾಂಕ 29–9–2015ರಂದು ಜರುಗಿದ ಹಿಂದಿನ ಕಾರ್ಯಕಾರಿ ಸಮಿತಿ ಸಭೆಯ ನಂತರ ಇದುವರೆಗಿನ ಅವಧಿಯಲ್ಲಿ ಕರಾವಿಪವು ಕೈಗೊಂಡ ಕಾರ್ಯಚಟುವಟಿಕೆಗಳ ವರದಿಯನ್ನು ಗೌರವ ಕಾರ್ಯದರ್ಶಿಗಳಾದ ಡಾ॥ (ಶ್ರೀಮತಿ) ವಸುಂಧರಾ ಭೂಪತಿಯವರು ಸಭೆಯಲ್ಲಿ ಮಂಡಿಸಿದರು. ಈ ಸಂಬಂಧ ಜರುಗಿದ ಚರ್ಚೆಯ ಮುಖ್ಯಾಂಶಗಳು ಇಂತಿವೆ:

(ಅ) ಪ್ರಸ್ತುತದಲ್ಲಿ ಕರಾವಿಪ ಹಮ್ಮಿಕೊಳ್ಳುತ್ತಿರುವ ವೈಜ್ಞಾನಿಕ ಕಾರ್ಯಕ್ರಮಗಳನ್ನು ಕೆಲವೇ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದ್ದು ಸದರಿ ಕಾರ್ಯಕ್ರಮಗಳು ರಾಜ್ಯದ ಎಲ್ಲ ಜಿಲ್ಲೆಗಳಿಗೂ ಸಮವಾಗಿ ಹಂಚಿಕೆಯಾಗಬೇಕು ಎಂಬುದನ್ನು ಸದಸ್ಯರು ವ್ಯಕ್ತಪಡಿಸಿದರು. ಇದಕ್ಕೆ ಅಧ್ಯಕ್ಷರು ತಮ್ಮ ಬೆಂಬಲವನ್ನು ಸೂಚಿಸುತ್ತಾ ಇದುವರೆಗೆ ರಾಜ್ಯಮಟ್ಟದ ಕಾರ್ಯಕ್ರಮಗಳು ಜರುಗದೇ ಇರುವ ಜಿಲ್ಲೆಗಳ ಯಾದಿಯನ್ನು ಸಿದ್ಧಪಡಿಸಿ ಮುಂದಿನ ಕಾರ್ಯಕಾರಿ ಸಮಿತಿಗೆ ಮಂಡಿಸಲು ಸಭೆಯು ಆಡಳಿತಾಧಿಕಾರಿಯವರಿಗೆ ಸೂಚಿಸಿತು.

ರಾಜ್ಯಮಟ್ಟದ ಕಾರ್ಯಕ್ರಮ ಆಯೋಜಿಸುವ ಸಂದರ್ಭದಲ್ಲಿ ಎಲ್ಲ ಅನುಕೂಲ ಹಾಗೂ ಅನಾನುಕೂಲಗಳನ್ನು ಗಮನಿಸಿ ನಿರ್ಣಯಿಸುವುದು ಸೂಕ್ತವೆಂದು ಡಾ॥ ಎಚ್.ಆರ್.ಸ್ವಾಮಿಯವರು ತಿಳಿಸಿದರು. 6 ತಿಂಗಳ ಮುಂಚಿತವಾಗಿ ರಾಜ್ಯಮಟ್ಟದ ಕಾರ್ಯಕ್ರಮಗಳ ಆಯೋಜನೆ ಕುರಿತಂತೆ ತೀರ್ಮಾನ ಕೈಗೊಳ್ಳುವುದು ಸೂಕ್ತವೆಂದು ಶ್ರೀ ಟಿ.ಜಿ. ಕೃಷ್ಣಮೂರ್ತಿರಾಜ್ ಅರಸುರವರು ಅಭಿಪ್ರಾಯಪಟ್ಟರು.

4. **ಪರಿಷತ್ತಿನ ತ್ರೈವಾರ್ಷಿಕ ಚುನಾವಣೆ :**
ಚುನಾವಣೆ ಪ್ರಕ್ರಿಯೆ ಸದ್ಯದಲ್ಲೇ ಆರಂಭವಾಗಬೇಕಿರುವ ಹಿನ್ನೆಲೆಯಲ್ಲಿ ಸೂಕ್ತ ಚುನಾವಣಾಧಿಕಾರಿಯೊಬ್ಬರನ್ನು ಆಧ್ಯತೆ ಮೇರೆಗೆ ನೇಮಿಸಬೇಕಿದ್ದು ಈ ಜವಾಬ್ದಾರಿಯನ್ನು ನಿರ್ವಹಿಸಲು ಮಾನ್ಯ ಅಧ್ಯಕ್ಷರು, ಗೌರವ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾದ ಶ್ರೀ ಚಳ್ಳಕೆರೆ ಯರ್‍ರಿಸ್ವಾಮಿಯವರಿಗೆ ಸಭೆಯು ಅಧಿಕಾರ ನೀಡಿತು. ಚುನಾವಣಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ ಪರಿಷತ್ತಿನ ಸದಸ್ಯರಿಂದ ಸ್ವೀಕೃತವಾಗುವ ಸಲಹೆಗಳನ್ನು ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಸಭೆಯು ಗೌರವ ಕಾರ್ಯದರ್ಶಿಯವರಿಗೆ ಸೂಚನೆ ನೀಡಿತು.

5. **ಪರಿಷತ್ತಿನ ಬೈಲಾ ಪರಿಷ್ಕರಣೆ :**
ದಿನಾಂಕ 18.10.2015 ರಂದು ಜರುಗಿದ ಸರ್ವಸದಸ್ಯರ ಮಹಾಸಭೆಯಲ್ಲಿ ಪರಿಷತ್ತಿನ ಬೈಲಾಗೆ ಸಂಬಂಧಿಸಿದಂತೆ ನೀಡಿದ ಶಿಫಾರಸ್ಸುಗಳನ್ನು ಪ್ರಸ್ತುತ ಸಭೆಯು ಪರಿಶೀಲಿಸಿ ಅವುಗಳಿಗೆ ಅನುಮೋದನೆ ಪಡೆಯುವ ಸಲುವಾಗಿ ಸರ್ವಸದಸ್ಯರ ವಿಶೇಷ ಮಹಾ ಸಭೆಯೊಂದನ್ನು ದಿನಾಂಕ 01.05.2016 ರಂದು ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಜರುಗಿಸಲು ಸಭೆ ತೀರ್ಮಾನಿಸಿತು. (ಆದರೆ, ನಂತರದ ಬೆಳವಣಿಗೆಯನ್ವಯ ಮೇ 1 ರಂದು ಕಾರ್ಮಿಕ ದಿನಾಚರಣೆ ಆಚರಿಸಲಿದ್ದು ಪರಿಷತ್ತಿನ ಹಲವಾರು ಸದಸ್ಯರಿಗೆ ಸಭೆಗೆ ಹಾಜರಾಗಲು ಅನಾನುಕೂಲವಾಗಬಹುದಾದುದರಿಂದ ವಿಶೇಷ ಮಹಾಸಭೆಯನ್ನು ಮೇ 8, 2016 (ಭಾನುವಾರ) ರಂದು ಜರುಗಿಸಲು ಉದ್ದೇಶಿಸಿದೆ).

**ಬೈಲಾ ಪರಿಷ್ಕರಣಾ ಸಮಿತಿ ಶಿಫಾರಸ್ಸುಗಳನ್ನು ಚರ್ಚಿಸಿ ಈ ಕೆಳಗಿನ ವಿಷಯಗಳ ಬಗ್ಗೆ ಮಾತ್ರ ನಿರ್ಣಯ ಕೈಗೊಳ್ಳಲಾಯಿತು.**

(ಅ) ಪರಿಷತ್ತಿನ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಪ್ರಸ್ತುತದಲ್ಲಿ ಜಾರಿಯಲ್ಲಿರುವಂತೆ 24 ಕ್ಕೆ ಸೀಮಿತಗೊಳಿಸುವುದು.

(ಆ) ಹಾಲಿ ಜಾರಿಯಲ್ಲಿರುವ 'ನೋಂದಾಯಿತ ಅಂಚೆ ಮತದಾನ' ದ ಬದಲಿಗೆ ಜಿಲ್ಲಾವಾರು ಬ್ಯಾಲೆಟ್ ಬಾಕ್ಸ್ ಮುಖಾಂತರ ಕಾರ್ಯಕಾರಿ ಸಮಿತಿಯ 24 ಸ್ಥಾನಗಳಿಗೆ ಚುನಾವಣೆ ಜರುಗಿಸುವಂತೆ ಬೈಲಾ ಉಪಸಮಿತಿಯು ಶಿಫಾರಸ್ಸು ಮಾಡಿತ್ತು. ಆದರೆ, ಈ ವಿಷಯವನ್ನು ಪ್ರಸ್ತುತ್ತ ಕಾರ್ಯಕಾರಿ ಸಮಿತಿಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಹಿಂದೆ ಇದ್ದಂತೆ ಅಂಚೆ ಮತದಾನದ ಪದ್ದತಿಯನ್ನೇ ಮುಂದುವರಿಸುವುದು ಸೂಕ್ತ ಎಂದು ಸಭೆಯು ನಿರ್ಣಯಿಸಿತು.

(ಇ) **ಮಹಿಳೆ ಹಾಗೂ ಪ.ಜಾ ಮತ್ತು ಪ.ವ. ಕ್ಕೆ ಪ್ರಾತಿನಿಧ್ಯ :** ಕಾರ್ಯಕಾರಿ ಸಮಿತಿ ಸದಸ್ಯರ 24 ಸ್ಥಾನಗಳಲ್ಲಿ ವಿಭಾಗವಾರು "ಸರದಿ" ಆಧಾರ (rotation basis) ತಲಾ ಒಂದು ಸ್ಥಾನವನ್ನು ಮಹಿಳೆಯರಿಗೆ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಕ್ಕೆ ಮೀಸಲಿರಿಸುವುದು. ಪ್ರಾರಂಭದ ಹಂತದಲ್ಲಿ ಬೆಂಗಳೂರು ವಿಭಾಗಕ್ಕೆ ಹಾಗೂ ಮೈಸೂರು ವಿಭಾಗಕ್ಕೆ ಮೀಸಲಾತಿ ನೀಡುವಂತೆ ಹಾಗೂ ಮುಂದಿನ ಚುನಾವಣೆಯಲ್ಲಿ ಬೆಳಗಾವಿ ವಿಭಾಗಕ್ಕೆ ಪ.ಜಾ / ಪ.ವ ಹಾಗೂ ಗುಲ್ಬರ್ಗಾ ವಿಭಾಗಕ್ಕೆ ಮಹಿಳೆ ಮೀಸಲಾತಿ ನೀಡುವಂತೆ ಸಭೆಯು ನಿರ್ಣಯಿಸಿತು.

(ಈ) ಸದಸ್ಯತ್ವ ಹೊಂದಿದ ಕನಿಷ್ಟ 3 ವರ್ಷಗಳು ಕಳೆದ ನಂತರ ಮತದಾನದ ಹಕ್ಕಿಗೆ ಒಳಪಡುವುದು.

(ಉ) ಕಾರ್ಯಕಾರಿ ಸಮಿತಿ ಚುನಾವಣೆಯ ನಂತರ ಒಂದು ತಿಂಗಳೊಳಗಾಗಿ ಎಲ್ಲ ಜಿಲ್ಲಾ ಸಮಿತಿಗಳು ಪುನ: ರಚನೆಯಾಗಬೇಕು. ಜಿಲ್ಲಾ ಸಮಿತಿಯ ಅವಧಿಯು ಕಾರ್ಯಕಾರಿ ಸಮಿತಿಯ ಅವಧಿಯೊಂದಿಗೆ ಮುಕ್ತಾಯವಾಗುತ್ತದೆ.

(ಊ) ಕರಾವಿಪ ಸದಸ್ಯತ್ವ ಹೊಂದಲು ಯಾವುದಾದರೂ ಪುರಾವೆ ಇರತಕ್ಕದ್ದು. ಉದಾ : ಐ.ಡಿ. ಕಾರ್ಡ್ / ವಾಸ ಸ್ಥಳದ ಬಗ್ಗೆ ತಹಸೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರ / ಆಧಾರ್ ಕಾರ್ಡ್ ಇತ್ಯಾದಿ. ವಿಳಾಸ ಬದಲಾವಣೆಗೂ ಸಹ ಇದೇ ವಿಧಾನ ಅನ್ವಯವಾಗುತ್ತದೆ.

(ಋ) ರಾಜ್ಯದ ಯಾವುದೇ ತಾಲ್ಲೂಕಿನಲ್ಲಿ 10ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕರಾವಿಪ ಸದಸ್ಯರಿದ್ದರೆ ಅಂತಹ ತಾಲ್ಲೂಕುಗಳಲ್ಲಿ ಪರಿಷತ್ತಿನ ತಾಲ್ಲೂಕು ಸಮಿತಿಯನ್ನು ರಚಿಸುವುದು.

**6. ಬಾಲವಿಜ್ಞಾನ :**

ಬಾಲವಿಜ್ಞಾನ ಮಾಸಿಕದ ಪ್ರಧಾನ ಸಂಪಾದಕರಾದ ಡಾ॥ ಶೇಖರ್ ಗೌಳೇರ್‌ರವರು ಇತ್ತೀಚಿನ ಸಂಪಾದಕ ಮಂಡಳಿ ಸಭೆಯ ವರದಿಯನ್ನು ಮಂಡಿಸಿದರು. ಬಾಲವಿಜ್ಞಾನ ಪತ್ರಿಕೆಯ ಒಳಪುಟಗಳ ಗುಣಮಟ್ಟದಲ್ಲಿ ಹಾಗೂ ಲೇಖನಗಳಲ್ಲಿ ಹಲವಾರು ಲೋಪದೋಷಗಳು ಕಂಡುಬರುತ್ತಿರುವುದನ್ನು ಡಾ. ಗೌಳೇರ್‌ರವರು ಸಭೆಯ ಗಮನಕ್ಕೆ ತಂದರು. ಅಂತೆಯೇ ಪತ್ರಿಕೆಯ ಮುಖಪುಟದಲ್ಲಿ ಸಾಕಷ್ಟು clarity ಇಲ್ಲದಿರುವುದನ್ನೂ ಸಹ ಅವರು ಸಭೆಗೆ ತಿಳಿಸಿದರು. ಈ ಅಂಶಗಳನ್ನು ಸಭೆಯು ಗಂಭೀರವಾಗಿ ಪರಿಗಣಿಸಿ, ಇಂತಹ ಪ್ರಸಂಗಗಳು ಪುನರಾವರ್ತನೆಯಾಗದಂತೆ ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು.

**7. ಪುಸ್ತಕ ಪ್ರಕಟಣಾ ಸಮಿತಿಯ ವರದಿ :**

ಡಾ. ಎಚ್.ಆರ್. ಸ್ವಾಮಿಯವರು ಇತ್ತೀಚೆಗೆ ಜರುಗಿದ ಪ್ರಕಟಣಾ ಸಮಿತಿ ಸಭೆಯ ವರದಿಯನ್ನು ಮಂಡಿಸಿದರು. ಪ್ರಕಟಣಾ ವಿಭಾಗಕ್ಕೆ ಸ್ಥಳದ ಕೊರತೆ ಇರುವ ಕಾರಣ ಸಧ್ಯಕ್ಕೆ ಮುದ್ರಣ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ ಎಂಬ ಅಂಶವನ್ನು ಸಭೆಯ ಮುಂದಿಟ್ಟರು. ಪುಸ್ತಕಗಳ ಮುದ್ರಣ / ಮರುಮುದ್ರಣವನ್ನು ಅನಿರ್ಧಿಷ್ಟ ಕಾಲ ಸ್ಥಗಿತಗಗೊಳಿಸುವುದು ಸರಿಯಾದ ಕ್ರಮವಾಗಿಲ್ಲವಾದುದರಿಂದ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ ಪ್ರಕಟಣಾ ವಿಭಾಗಕ್ಕೆ ಹೆಚ್ಚುವರಿ ಸ್ಥಳಾವಕಾಶ ಒದಗಿಸುವ ಕುರಿತು ತ್ವರಿತ ಕ್ರಮ ಕೈಗೊಳ್ಳುವಂತೆ ಸಭೆಯು ಸೂಚಿಸಿತು. ಏತನ್ಮಧ್ಯೆ, ಪ್ರಸ್ತುತದಲ್ಲಿ ಸ್ಥಗಿತಗೊಳಿಸಲಾಗಿರುವ ಪುಸ್ತಕಗಳ ಮುದ್ರಣವನ್ನು ಆದ್ಯತೆ ಮೇರೆಗೆ ಪುನ: ಕೈಗೊಳ್ಳುವಂತೆ ಶ್ರೀ ನಾಗೇಶ್ ಅರಳುಕುಪ್ಪೆಯವರು ನೀಡಿದ ಸಲಹೆಯನ್ನು ಪರಿಶೀಲಿಸಿ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಪ್ರಕಟಣಾ ಸಮಿತಿಗೆ ಸಭೆಯು ನಿರ್ದೇಶಿಸಿತು.

ಅಲ್ಲದೆ, ಕಚೇರಿಯ ಮುಂಭಾಗದಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಒಂದು ಮಳಿಗೆಯನ್ನು ಸ್ಥಾಪಿಸುವ ಯೋಜನೆಯನ್ನು ಡಾ. ಎಚ್.ಆರ್. ಸ್ವಾಮಿಯವರು ಸಭೆಗೆ ತಿಳಿಸಿದರು. ಈ ಕುರಿತು ಹಿಂದೆ ಅಗತ್ಯ ಕ್ರಮ ಕೈಗೊಂಡಿದ್ದಾಗ್ಯೂ ಮತ್ತೊಮ್ಮೆ ನುರಿತ ಇಂಜಿನಿಯರ್ ರೊಬ್ಬರಿಂದ ಸ್ಥಳದ ಸಮೀಕ್ಷೆ (survey) ನಡೆಸಿ ಯೋಜನೆಯನ್ನು ಸಿದ್ಧಪಡಿಸಲು ಸಭೆಯು ಶ್ರೀ ನಾಗೇಶ್ ಅರಳುಕುಪ್ಪೆಯವರಿಗೆ ಜವಾಬ್ದಾರಿ ನೀಡಿತು. ಏತನ್ಮಧ್ಯೆ ಕರಾವಿಪದ ಪಶ್ಚಿಮ ಭಾಗದಲ್ಲಿರುವ ದಾಸ್ತಾನು ಕೊಠಡಿಯ ಮುಂದೆ ಕುರ್ಚಿ–ಟೇಬಲ್‌ಗಳನ್ನು ಇರಿಸಿ ಸರದಿಯಾಧಾರ ಕಚೇರಿಯ ಒಬ್ಬ ಸಿಬ್ಬಂದಿಯಿಂದ ಪುಸ್ತಕಗಳ ಮಾರಾಟ ವ್ಯವಸ್ಥೆಯನ್ನು ಮಾಡಲು ಸಭೆಯು ನಿರ್ದೇಶಿಸಿತು.

ಕರಾವಿಪ ಪುಸ್ತಕಗಳನ್ನು ಮಾರಾಟ ಮಾಡುವ ಜವಾಬ್ದಾರಿಯನ್ನು ಮೊದಲ ಆದ್ಯತೆ ಮೇರೆಗೆ (first priority) ಸಂಬಂಧಪಟ್ಟ ಜಿಲ್ಲಾ ಸಮಿತಿಗೆ ನೀಡುವುದು. ಒಂದು ವೇಳೆ ಇದು ಸಾಧ್ಯವಾಗದಿದಲ್ಲಿ ಪರಿಷತ್ತಿನ ಕೇಂದ್ರ ಕಚೇರಿಯ ಸಿಬ್ಬಂದಿಯನ್ನು ಮಾರಾಟ ಸ್ಥಳಕ್ಕೆ ನಿಯೋಜಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು.

8) **ಆರ್ಥಿಕ ಸಮಿತಿ ನಡವಳಿ :**

ಪೂರ್ವಾಹ್ನ ಜರುಗಿದ ಕರಾವಿಪದ ಆರ್ಥಿಕ ಸಮಿತಿ ಸಭೆಯ ನಡವಳಿಯ ಮೊದಲ ಎರಡು ಅಂಶಗಳಿಗೆ ಪ್ರಸ್ತುತ ಸಭೆಯು ಅನುಮೋದನೆ ನೀಡಿತು. ಉಳಿದಂತೆ, ವಿಷಯ ಸೂಚಿಯಲ್ಲಿ ಪಟ್ಟಿ ಮಾಡಿದ ಪರಿಷತ್ತಿನ ಸಿಬ್ಬಂದಿ ಸೌಲಭ್ಯಗಳನ್ನು ಅರ್ಹತೆ ಆಧಾರ (merit) ಪರಿಶೀಲಿಸಿ ಸರ್ಕಾರದಿಂದ ಬಾಕಿ ಇರುವ ರೂ.40.00 ಲಕ್ಷಗಳ ಅನುದಾನ ಸ್ವೀಕೃತವಾದ ನಂತರ ಇತ್ಯರ್ಥಗೊಳಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು.

ಶ್ರೀ ಆರ್.ಜಿ. ಅಥಣಿಯವರು ತಮ್ಮ ಕೌಟುಂಬಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ಬೆಳಗಾವಿಯ ಡಾ॥ ಸ.ಜ. ನಾಗಲೋಟಿಮಠ ವಿಜ್ಞಾನ ಕೇಂದ್ರಕ್ಕೆ ವರ್ಗಾವಣೆ ಕೋರಿ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿ ಶ್ರೀಯುತರ ವರ್ಗಾವಣೆಗೆ ಸಮ್ಮತಿ ಸೂಚಿಸಿತು. ಶ್ರೀ ಆರ್.ಜಿ. ಅಥಣಿಯವರ ವರ್ಗಾವಣೆ ಜೊತೆಯಲ್ಲಿಯೇ ಕರಾವಿಪದ ಈ ಕೆಳಕಂಡ ಮೂರು ಪ್ರಮುಖ ಯೋಜನೆಗಳನ್ನು ಬೆಳಗಾವಿಯ ಡಾ॥ ಸ.ಜ. ನಾಗಲೋಟಿಮಠ ವಿಜ್ಞಾನ ಕೇಂದ್ರದ ಮೇಲುಸ್ತುವಾರಿಗೆ ವಹಿಸುವಂತೆ ಸಭೆಯು ಸೂಚಿಸಿತು.

1. ಪದವಿ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ
2. ಪದವಿ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಅಂತರ ಕಾಲೇಜು ಕನ್ನಡ ವಿಜ್ಞಾನ ಉಪನ್ಯಾಸ ಸ್ಪರ್ಧೆ
3. ಉದಯೋನ್ಮುಖ ಕನ್ನಡ ವಿಜ್ಞಾನ ಬರಹಗಾರರ ಕಮ್ಮಟ

9) **ಹೊಸ ಆಸನಗಳ ಅಳವಡಿಕೆ ಹಾಗೂ ಕೆ–ಸ್ಟೆಪ್ಸ್ ಜೊತೆ ಕಾರ್ಯಕ್ರಮಗಳ ಆಯೋಜನೆ :**

ಕರಾವಿಪದ ಪ್ರೊ॥ ಎಂ.ಎ. ಸೇತುರಾವ್ ಸಭಾಂಗಣದಲ್ಲಿ ಹೊಸ ಆಸನಗಳ ಅಳವಡಿಕೆಗೆ ನೆರವು ನೀಡಲು ಹಾಗೂ ಸದರಿ ಸಭಾಂಗಣದಲ್ಲಿ ಕರಾವಿಪ ಜೊತೆ ಕಾರ್ಯಕ್ರಮಗಳನ್ನು ಆಯೋಜಿಸಲು ಕೆ–ಸ್ಟೆಪ್ಸ್ ಮುಂದೆ ಬಂದಿದ್ದು, ಇದಕ್ಕೆ ಸಮ್ಮತಿ ನೀಡುತ್ತಾ ಮುಂದಿನ ಕ್ರಮ ಕೈಗೊಳ್ಳುವಂತೆ ಸಭೆಯು ಸೂಚಿಸಿತು.

10) **ಶ್ರೀ ಮುಷ್ಟೂರಪ್ಪನವರ ಪತ್ರ ಕುರಿತು.**

ಕರಾವಿಪ ಸಿಬ್ಬಂದಿಯಲ್ಲೊಬ್ಬರಾದ ಶ್ರೀ ವಿ.ಎಸ್. ಸರ್ವದೆಯವರು 2014ರ ಸಿ.ಎಸ್.ಸಿ. ಸಂದರ್ಭ ತಮ್ಮೊಡನೆ ವರ್ತಿಸಿದ ರೀತಿ ಕುರಿತಂತೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕೋರಿ ಸುಮಾರು ಒಂದು ವರ್ಷಗಳ ಹಿಂದೆಯೇ ತಾವು ದೂರನ್ನು ಸಲ್ಲಿಸಿದ್ದಾಗ್ಯೂ ಇದುವರೆಗೂ ಯಾವ ಕ್ರಮ ಕೈಗೊಳ್ಳದಿರುವ ಬಗ್ಗೆ ಶ್ರೀ ಮುಷ್ಟೂರಪ್ಪನವರು ತೀವ್ರತರ ವಿಷಾದ ವ್ಯಕ್ತಪಡಿಸಿದರು.

ಈ ಕುರಿತು ಸಮಜಾಯಿಷಿ ನೀಡುತ್ತಾ ಶ್ರೀ ಸರ್ವದೆ ಹಾಗೂ ಶ್ರೀ ಪ್ರಭು ಎಸ್. ಮಠ – ಇವರಿಬ್ಬರ ವರ್ತನೆ ಬಗ್ಗೆ ತನಿಖೆ ಜರುಗಿಸಲು ಮೊದಲಿಗೆ ಶ್ರೀ ಬಿ. ದೊಡ್ಡಬಸಪ್ಪನವರನ್ನು ಹಾಗೂ ನಂತರದಲ್ಲಿ ಡಾ. ಆರ್.ಎಸ್. ಎಲಿಯವರನ್ನು ನೇಮಿಸಲಾಗಿದ್ದು, ಇತ್ತೀಚೆಗೆ ಡಾ. ಆರ್.ಎಸ್. ಎಲಿಯವರು ತನಿಖೆ ಮುಗಿಸಿ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಅಧ್ಯಕ್ಷರು ಸ್ಪಷ್ಟೀಕರಣ ನೀಡಿದರು.

ಈ ನಿಟ್ಟಿನಲ್ಲಿ ಡಾ. ಶೇಖರ್ ಗೌಳೇರ್, ಡಾ. ಎಚ್.ಆರ್. ಸ್ವಾಮಿ ಹಾಗೂ ಪ್ರೊ॥ ಸಿ. ನಾಗರಾಜ್‌ರವರನ್ನೊಳಗೊಂಡ ವಿಚಾರಣಾ ಸಮಿತಿಯೊಂದನ್ನು ಸಭೆಯಲ್ಲಿ ರಚಿಸಲಾಗಿ 15 ದಿನಗಳ ಅವಧಿಯಲ್ಲಿ ವಿಚಾರಣೆ ಜರುಗಿಸಿ ಅಂತಿಮ ವರದಿಯನ್ನು ನೀಡುವಂತೆ ಸಭೆಯು ಸೂಚಿಸಿತು.

11) **ಗುಲ್ಬರ್ಗಾದಲ್ಲಿ ಕರಾವಿಪದ ಶಾಖೆ ತೆರೆಯುವ ಕುರಿತು.**

ರಾಜ್ಯ ಸರ್ಕಾರದಿಂದ HKDBಗೆ ಸುಮಾರು 1,000 ಕೋಟಿ ವಾರ್ಷಿಕ ಅನುದಾನ ದೊರಕುತ್ತಿದ್ದು, ಇದರಲ್ಲಿ ಗಣನೀಯ ಪ್ರಮಾಣದ ಹಣವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಮೀಸಲಿಡಲಾಗಿದೆ ಎಂಬ ಅಂಶವನ್ನು ಕರಾವಿಪ ಖಜಾಂಚಿ ಶ್ರೀ ಗಿರೀಶ್ ಬಿ. ಕಡ್ಲೇವಾಡರವರು ಸಭೆಯ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಕರಾವಿಪವು HKDBಯಿಂದ ಆರ್ಥಿಕ ನೆರವು ಪಡೆದು ಹೈದರಾಬಾದ್–ಕರ್ನಾಟಕ ಪ್ರಾಂತ್ಯದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಬಹುದಾಗಿದ್ದು, ಇದಕ್ಕಾಗಿ ಗುಲ್ಬರ್ಗಾದಲ್ಲಿ ಪರಿಷತ್ತಿನ ಶಾಖೆಯೊಂದನ್ನು ತೆರೆದು ಇಬ್ಬರು ಸಿಬ್ಬಂದಿಯನ್ನು ನಿಯೋಜಿಸುವಂತೆ ಕೋರಿದರು. ಶ್ರೀಯುತರ ಕೋರಿಕೆಯನ್ನು ಪರಿಶೀಲಿಸಿ, ಸಭೆಯು ತಾತ್ವಿಕ ಒಪ್ಪಿಗೆಯನ್ನು ನೀಡಿತಾದರೂ ತಕ್ಷಣದಲ್ಲಿ ಕೆಲವೊಂದು ತಾಂತ್ರಿಕ ಹಾಗು ಆಡಳಿತಾತ್ಮಕ ತೊಂದರೆಗಳ ಹಿನ್ನೆಲೆಯಲ್ಲಿ ಸಿಬ್ಬಂದಿಯನ್ನು ಒದಗಿಸಲು ಕಷ್ಟಸಾಧ್ಯವೆಂದು ಸಭೆಯು ಅಭಿಪ್ರಾಯಪಟ್ಟಿತು. ಸಧ್ಯಕ್ಕೆ ಈ ಸಂಬಂಧ ಸ್ಥಳೀಯವಾಗಿ ತಾತ್ಕಾಲಿಕ ವ್ಯವಸ್ಥೆ ಮಾಡಕೊಳ್ಳುವಂತೆ ಖಜಾಂಚಿಯವರಿಗೆ ಸಭೆಯು ಸೂಚಿಸಿತು.

12) **ಇತರೆ ವಿಷಯಗಳು.**

*(i) ಪ್ರೊ॥ ಕೆ.ಎಸ್.ಎನ್. ರವರ ರಾಜೀನಾಮೆ ಕುರಿತು.*

ಕರಾವಿಪದಲ್ಲಿ ಶೈಕ್ಷಣಿಕ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ॥ ಕೆ.ಎಸ್. ನಟರಾಜ್‌ರವರು 4 ತಿಂಗಳುಗಳ ಅವಧಿ ಅಮೇರಿಕಾಕ್ಕೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಈ ಸಂಬಂಧ ಅವರು ಅರ್ಜಿ ಸಲ್ಲಿಸಿರುವುದನ್ನು ಗೌರವ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಪ್ರೊ॥ ಕೆ.ಎಸ್.ಎನ್. ರವರು ಕಳೆದ ಹಲವಾರು ವರ್ಷಗಳಿಂದ ಪರಿಷತ್ತಿನಲ್ಲಿ ಸೇವೆ ಸಲ್ಲಿಸುತ್ತಿದ್ದು, ಕರಾವಿಪದ ಎಲ್ಲ ಕಾರ್ಯಕ್ರಮಗಳಲ್ಲೂ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದುದನ್ನು ಸಭೆಯು ಸ್ಮರಿಸಿತು. ಶ್ರೀಯುತರ ರಾಜೀನಾಮೆಗೆ ಸಭೆಯು ವಿಷಾದ ವ್ಯಕ್ತಪಡಿಸಿತಾದರೂ ಇದು ಅವರ ವೈಯಕ್ತಿಕ ವಿಷಯವಾದ್ದರಿಂದ, ಮುಂದೆಯೂ ಇದೇ ರೀತಿ ಕರಾವಿಪಕ್ಕೆ ಮಾರ್ಗದರ್ಶನ ನೀಡುತ್ತಾರೆಂಬ ಭರವಸೆಯೊಂದಿಗೆ, ಅವರ ರಾಜೀನಾಮೆಯನ್ನು ಸಭೆಯು ಅಂಗೀಕರಿಸಿತು.

(ii) ಕರಾವಿಪ ಖಜಾಂಚಿ ಶ್ರೀ ಗಿರೀಶ್ ಬಿ. ಕಡ್ಲೇವಾಡ ಅವರ ವಿರುದ್ಧ ಮೇಲಿಂದ ಮೇಲೆ ಆಧಾರ ರಹಿತ ದೂರುಗಳು ಬರುತ್ತಿರುವ ವಿಷಯವನ್ನು ಸಭೆಯು ಗಂಭೀರವಾಗಿ ಚರ್ಚಿಸಿ, ಖಂಡಿಸಿತು. ಶ್ರೀಯುತರು ಖಜಾಂಚಿ ಹುದ್ದೆಯಲ್ಲಿ ಉತ್ತಮ ಕೆಲಸ-ಕಾರ್ಯಗಳನ್ನು ನಿರ್ವಹಿಸುತ್ತಿರುವುದನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಸಭೆಯು ಆಧಾರ ರಹಿತ ದೂರುಗಳನ್ನು ಸಲ್ಲಿಸುವ ಪರಿಪಾಠ ನಿಲ್ಲಬೇಕೆಂದು ಅಭಿಪ್ರಾಯ ಪಟ್ಟಿತು.

**(iii) ವಿಶೇಷ ಅಭಿವೃದ್ಧಿ ಯೋಜನೆ :**

2013-14 ಹಾಗೂ 2014-15ರಲ್ಲಿ ಅನುಷ್ಠಾನಗೊಳಿಸಿದ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಅನುಕ್ರಮವಾಗಿ ರೂ. 2.25 ಲಕ್ಷಗಳು ಮತ್ತು ರೂ. 8.75 ಲಕ್ಷಗಳ ಹಣ ಉಳಿತಾಯವಾಗಿದ್ದು, ಈ ಹಣವನ್ನು ಬಳಸಿಕೊಂಡು ಸದರಿ ಯೋಜನೆಯಡಿಯಲ್ಲಿ ಮುಂದುವರೆದ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಸಂಬಂಧಪಟ್ಟ ರಾಜ್ಯ ಸಂಯೋಜಕರಿಗೆ ಸಭೆಯು ನಿರ್ದೇಶಿಸಿತು. ಗುಲ್ಬರ್ಗಾ ವಿಭಾಗಕ್ಕೆ ಸಂಬಂಧಪಟ್ಟಂತೆ ಶ್ರೀ ಗಿರೀಶ್ ಬಿ. ಕಡ್ಲೇವಾಡರವರು ಬೆಂಗಳೂರು ವಿಭಾಗಕ್ಕೆ ಸಂಬಂಧಪಟ್ಟಂತೆ ಶ್ರೀ ಚಳ್ಳಕೆರೆ ಯರ್ರಿಸ್ವಾಮಿಯವರು ಕಾರ್ಯಕ್ರಮದ ಮೇಲುಸ್ತುವಾರಿಯನ್ನು ವಹಿಸಿಕೊಳ್ಳುವುದೆಂದು ಸಭೆಯು ನಿರ್ದೇಶನ ನೀಡಿತು.

ಕರಾವಿಪದ ಉಪಾಧ್ಯಕ್ಷರಾದ ಶ್ರೀ ಬಿ. ದೊಡ್ಡಬಸಪ್ಪ ಅವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

*****

ಗೌರವ ಕಾರ್ಯದರ್ಶಿ

ಅಧ್ಯಕ್ಷರು